**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು</u>**

**<u>ಸೆಷನ್ಸ್ ಕೇಸ್ ನಂಬ್ರ 211/2023</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಸುಧೀಶ್ ಹೆಗ್ಡೆ | <u>ಪ್ರಾಸಾಃ 4</u> |
| ತಂದೆಯ ಹೆಸರು | : | ಶಿವರಾಮ್ ಹೆಗ್ಡೆ | ಚಾಸಾಃ 9 |
| ಪ್ರಾಯ | : | 36 ವರ್ಷ | **ದಿನಾಂಕಃ 27.01.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸುದಿ ಸ್ಟುಡಿಯೋ ಮಾಲಿಕ | |
| ವಾಸಸ್ಥಳ | : | ಪೊಂಗತ್ಯಾರು ಮನೆ, ಬಾಡಾರು, ಬಜಿರೆ ಗ್ರಾಮ, ಬೆಳ್ತಂಗಡಿ ತಾಲೂಕು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ನಾನು ಕಳೆದ 8 ವರ್ಷಗಳಿಂದ ವೇಣೂರು ಸುದಿ ಸ್ಟುಡಿಯೋ ಎಂದು ಅಂಗಡಿಯನ್ನು ನಡೆಸುತ್ತಿದ್ದೇನೆ.

2. ನನಗೆ ಚಾಸಾ-2 ರವರು ಪರಿಚಯ ಇದ್ದು ಅವರು ನಮ್ಮ ಊರಿನವರು. ದಿನಾಂಕ 10.08.2023 ರಂದು ಚಾಸಾ-2 ರವರು ನನ್ನ ಸ್ಟುಡಿಯೋಗೆ ಬಂದು, ಕೊರಗಜ್ಜನ ಕಟ್ಟೆಗೆ ಆರೋಪಿ ಬೆಂಕಿ ಕೊಟ್ಟ ದೃಶ್ಯಾವಳಿಯನ್ನು ಚಾಸಾ-2 ರವರು ಅವರ ಮೊಬೈಲ್ ಮಾಡಿರುವುದಾಗಿ ಹೇಳಿದ್ದು, ಅದನ್ನು ಸಿಡಿಗೆ ವರ್ಗಾಯಿಸಿ ನೀಡುವಂತೆ ಹೇಳಿರುತ್ತಾರೆ. ಅದರಂತೆ ನಾನು ಮೊಬೈಲನ್ನು ಕಂಪ್ಯೂಟರ್ ಗೆ ಕೇಬಲ್ ಮೂಲಕ ಹಾಕಿ, ಅದರಲ್ಲಿದ್ದ 4 ದೃಶ್ಯಾವಳಿಗಳನ್ನು ACER ಕಂಪನಿಯ ಕಂಪ್ಯೂಟರ್ ಗೆ ವರ್ಗಾಯಿಸಿ ಅಲ್ಲಿಂದ COMPREX ಕಂಪನಿಯ ಸಿಡಿ ಗೆ ವರ್ಗಾಯಿಸಿ, ಚಾಸಾ2 ರವರಿಗೆ ನೀಡಿರುತ್ತೇನೆ. ಅಲ್ಲಿಂದ ಚಾಸಾ-2 ರವರ ಜೊತೆ

ಪೊಲೀಸ್ ಠಾಣೆಗೆ ಹೋಗಿದ್ದು ಅಲ್ಲಿ ಚಾಸಾ-2 ರವರುಸದರಿ ಸಿಡಿಯನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು ಅದನ್ನು ಠಾಣೆಯಲ್ಲಿದ್ದ ಲ್ಯಾಪ್ ಟಾಪ್ ನಲ್ಲಿ ವೀಕ್ಷಿಸಿ, ಅದನ್ನು ವಶಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ ಮತ್ತು ಒಂದು ದಾಖಲೆಗೆ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು **ನಿಪಿ-6(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ಫೋಟೋವನ್ನು **ನಿಪಿ-10** ಎಂದು ಗುರುತಿಸಲಾಯಿತು. ಸಾಕ್ಷಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ.

3. ನಂತರ ದಿನಾಂಕ 04.09.2023 ರಂದು ನನ್ನನ್ನು ವೇಣೂರು ಠಾಣೆಗೆ ಕರೆಸಿದ್ದು, ನಾನು ಸದರಿ ದೃಶ್ಯಾವಳಿಗಳನ್ನು ಸಿಡಿಗೆ ವರ್ಗಾಯಿಸಿದ ಬಗ್ಗೆ ದೃಢಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ 65 ಬಿ ದೃಢಪತ್ರವನ್ನು **ನಿಪಿ-11** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-11(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ಸಿಡಿಯನ್ನು ಮತ್ತು ಸದರಿ ಸಿಡಿಯಲ್ಲಿರುವ ದೃಶ್ಯಾವಳಿಗಳನ್ನು ನೊಡಿದರೆ ಗುರುತಿಸುವುದಾಗಿ ನುಡಿಯುತ್ತಾರೆ. ಸಿಡಿಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ. ನಿಪಿ-5 ರ ಸಿಡಿಯನ್ನು ನ್ಯಾಯಾಧೀಶರ ಅನುಮತಿ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ತೋರಿಸಲಾಗಿ, ಸಾಕ್ಷಿ ಅದರಲ್ಲಿ ಕಾಣುವ 4 ದೃಶ್ಯಾವಳಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-5(ಎ) ಯಿಂದ ನಿಪಿ-5(ಡಿ) ಎಂದು ಗುರುತಿಸಲಾಗಿರುತ್ತದೆ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ. )**

**ಪಾಟೀ ಸವಾಲು ಮಾನ್ಯ ಸರಕಾರಿ ಅಭಿಯೋಜಕರಿಂದಃ**

4. ಸದರಿ ದೃಶ್ಯಾವಳಿಗಳನ್ನು ಸಿಡಿಗೆ ವರ್ಗಾವಣೆ ಮಾಡಿದ ಕಂಪನಿಯ ಹೆಸರು FRONTECH ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ.ಕೆ ವಕೀಲರಿಂದ**

5. ಚಾಸಾ-1 ನಮ್ಮ ಪಕ್ಕದ ಮನೆಯವರಾಗಿದ್ದು ನನಗೆ ಚಿಕ್ಕ ವಯಸ್ಸಿನಿಂದ ಪರಿಚಯ. ವಿವಾದಿತ ಕೊರಗಜ್ಜನ ಕಟ್ಟೆ ಯ ಜಾಗದಲ್ಲಿ ಆರೋಪಿಯ ತಂದೆಯವರು ಕೋಲ ಮಾಡಿಸುತ್ತಿದ್ದ ಬಗ್ಗೆ ಗೊತ್ತಾ ಮತ್ತು ಅಲ್ಲಿಗೆ ಹೋಗಿರುತ್ತಿರಾ ಎಂದರೆ ನನಗೆ ತಿಳಿದಿಲ್ಲ. ನನ್ನ ಮತ್ತು ಚಾಸಾ-1 ರವರ ಮನೆ 250 ಮೀ ಅಂತರದಲ್ಲಿ ಇದೆ. ಕೊರಗಜ್ಜ ಕಟ್ಟೆಗೆ ನಮ್ಮ ಮನೆಯಿಂದ ಒಳದಾರಿಯಲ್ಲಿ ಹೋದರೆ 2-3 ಕಿ.ಮೀ ಇರುತ್ತದೆ. ವಿವಾದಿತ ಕೊರಗಜ್ಜನ ಕಟ್ಟೆಗೆ ನಾನು ಇಲ್ಲಿಯತನಕ ಹೋಗಿರುವುದಿಲ್ಲ.

6. ವೇಣೂರು ಠಾಣೆಯಿಂದ ನಮ್ಮ ಸ್ಟುಡಿಯೋ 500 ಮೀ ಅಂತರ ಇರುತ್ತದೆ. ನಾನು ಪೋಲಿಸ್ ಠಾಣೆಯ ಕಾರ್ಯಕ್ರಮಗಳಿಗೆ ಕೆಲವೊಮ್ಮೆ ನನ್ನನ್ನು ಪೋಟೋ ತೆಗೆಯಲು ಕರೆದಿರುತ್ತಾರೆ. ಸದರಿ ಸಂದರ್ಭದಲ್ಲಿ ಪೋಟೋಗಳಿಗೆ

ನಾನು ಸರ್ಟಿಫಿಕೇಟ್ ನೀಡುವುದಿಲ್ಲ ಮತ್ತು ಠಾಣೆಗೆ ಹೋಗಿ ಸಹಿ ಮಾಡುವುದಿಲ್ಲ. ಚಾಸಾ-2 ರವರು ನಮ್ಮ ಊರಿನವರು ಮತ್ತು ನನಗೆ ನೋಡಿ ಪರಿಚಯ, ಸುಮಾರು 10 ವರ್ಷಗಳಿಂದ ಪರಿಚಯ ಇರಬಹುದು.

7. ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ, ಚಾಸಾ-2 ರವರು ನನಗೆ ಮೊಬೈಲ್ ನಲ್ಲಿ ವಿಡಿಯೋವನ್ನು ತೋರಿಸಿದ್ದು ಅದನ್ನು ನಾನು ಸಿಡಿಗೆ ವರ್ಗಾಯಿಸಿರುತ್ತೇನೆ. ಚಾಸಾ-2 ರವರು ನೀಡಿದ ಮೊಬೈಲ್ ನ ವಿಡಿಯೋ ಅದು ಎಷ್ಟು ಸಮಯದ ವಿಡಿಯೋ ಎಂದರೆ ಸುಮಾರು 20 ದಿನಗಳ ಹಿಂದಿನ ವಿಡಿಯೋ ಆಗಿರಬಹುದು. ನಾನು ನೀಡಿದ ಸರ್ಟಿಫೀಕೆಟಿನಲ್ಲಿ ಸದರಿ ವಿಡಿಯೋ 20 ದಿನಗಳ ಹಿಂದಿನದ್ದು ಎಂದು ನಮೂದು ಮಾಡಿರುವುದಿಲ್ಲ. ಪೋಲಿಸರು ಆ ಬಗ್ಗೆ ನನ್ನನ್ನು ವಿಚಾರಿಸಿರುವುದಿಲ್ಲ, ಸದರಿ ಘಟನೆ ಚಾಲ್ತಿಯಲ್ಲಿದ್ದುದ್ದರಿಂದ ನನ್ನನ್ನು ವಿಚಾರಿಸಿರುವುದಿಲ್ಲ ಮತ್ತು ನಾನು ಸಹ ಸದರಿ ವಿಡಿಯೋ 20 ದಿನಗಳ ಹಿಂದಿನದ್ದು ಎಂದು ಹೇಳಿರುವುದಿಲ್ಲ. ಪೋಲಿಸರು ಸದರಿ ವಿಡಿಯೋ ವನ್ನು ಹಿಂದೆ ನೋಡಿದ್ದಾರೋ ಇಲ್ಲವೋ ಎಂದು ನಿಮಗೆ ಗೊತ್ತಾ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

8. ನಿಪಿ-6 ನ್ನು ನಾನು ವಿಚಾರ ತಿಳಿದೇ ಸಹಿ ಮಾಡಿರುತ್ತೇನೆ. ನಿಪಿ-6 ರಲ್ಲಿ ನೀವು ಯಾವ ಕಂಪ್ಯೂಟರ್ ಉಪಯೋಗಿಸಿರುವ ಬಗ್ಗೆ ನಮೂದು ಇದೆಯಾ ಎಂದರೆ ಇದೆ , ಅದು ACER ಎಂದು ನುಡಿಯುತ್ತಾರೆ. ಚಾಸಾ-2 ರವರದ್ದು ಯಾವ ಕಂಪನಿಯ ಮೊಬೈಲ್ ಎಂಬುದು ಸಹ ನಮೂದು ಇದೆ, ಅದು VIVO ಕಂಪನಿ

ಎಂದು ನಮೂದು ಇದೆ. ಪೋಲಿಸರು ನನ್ನ ಹೇಳಿಕೆಯನ್ನು 4 ಮತ್ತು 10 ನೇ ತಾರೀಖಿನಂದು ಬಿಟ್ಟು ಬೇರೆ ಯಾವುದೇ ದಿನ ಪಡೆದಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಚಾಸಾ-2 ರವರ ಹೇಳಿಕೆಯನ್ನು ಪಡೆದಿರುವುದಿಲ್ಲ.

9. ಗಣೇಶ್ ಎನ್ನುವವರ ಪರಿಚಯ ನನಗಿಲ್ಲ. ಚಾಸಾ-2 ರವರಿಗೆ ಗಣೇಶ್ ರವರ ಪರಿಚಯ ಇರುವ ಬಗ್ಗೆ ನನಗೆ ತಿಳಿದಿಲ್ಲ. ಚಾಸಾ-2 ರವರು ನಿಮ್ಮ ಬಳಿ ಬಂದು ಮೊಬೈಲ್ ನೀಡಿದ ಸಮಯ ಅವರು ಅದರಲ್ಲಿದ್ದ ವಿಡಿಯೋ ವನ್ನು ಯಾರಿಗೆಲ್ಲಾ ತೋರಿಸಿರುತ್ತಾರೆ ಎಂದು ಕೇಳಿರುತ್ತೀರಾ ಎಂದರೆ ಇಲ್ಲ. ನನಗೆ ಸ್ಟುಡಿಯೋ ಇರುವ ಬಗ್ಗೆ ಮತ್ತು ಕಂಪ್ಯೂಟರ್ ಮಾಹಿತಿ ಇರುವ ಬಗ್ಗೆ ಪೋಲಿಸರು ದಾಖಲೆಗಳನ್ನು ಕೇಳಿರುವುದಿಲ್ಲ. ನಿಮ್ಮ ಪ್ರಕಾರ ನೀವು ಎಷ್ಟು ಬಾರಿ ಠಾಣೆಗೆ ಹೋಗಿರುತ್ತೀರಿ ಎಂದರೆ ಎರಡು ಬಾರಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಗಿರುತ್ತೇನೆ.

10. ನನ್ನ ಅಂಗಡಿಯಲ್ಲಿ ಎರಡು ಕಂಪನಿಗಳ ಸಿಡಿ ಇರುತ್ತದೆ, ಆದರೆ ಅನೇಕ ಕಂಪನಿಗಳ ಸಿಡಿ ಇರುತ್ತದೆ. ನಿಪಿ-5 ರ ಸಿಡಿಯಲ್ಲಿ ಆರೋಪಿ ಬೆಂಕಿ ಕೊಡುತ್ತಿರುವ ದೃಶ್ಯ ಕಾಣಿಸುವುದಿಲ್ಲ ಎಂದರೆ ಸದರಿ ದೃಶ್ಯಾವಳಿಗಳನ್ನು ZOOM ಮಾಡಿ ನೋಡಿದರೆ ಕಾಣುತ್ತದೆ. ಅವರು ವೈಯಕ್ತಿಕವಾಗಿ ಬೆಂಕಿ ಹಚ್ಚುವುದು ಕಾಣುತ್ತದೆ. ನಾನು ಆರೋಪಿ ವೈಯಕ್ತಿಕವಾಗಿ ಬೆಂಕಿ ಹಚ್ಚುವುದು ದೃಶ್ಯಾವಳಿಯಲ್ಲಿ ಕಾಣುವ ಬಗ್ಗೆ ಪೋಲಿಸರಿಗೆ ಹೇಳಿರುವುದಿಲ್ಲ ಎಕೆಂದರೆ ಅವರು ಕೇಳಿರುವುದಿಲ್ಲ. ಆರೋಪಿ ವೈಯಕ್ತಿಕವಾಗಿ ಬೆಂಕಿ ಹಚ್ಚುವ ದೃಶ್ಯಾವಳಿ

ನ್ಯಾಯಾಲಯದ ಮುಂದೆ ಪ್ಲೇ ಮಾಡುವ ಆಗಲಿ ಅಥವಾ ನಾನು ಸಿಡಿಗೆ ವರ್ಗಾಯಿಸಿ ಕೊಟ್ಟ ಸಮಯದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಾವು ಎದುರು ಮುಖ ಮಾಡಿ ನಿಂತಾಗ ನಮ್ಮ ಹಿಂದೆ ಏನು ನಡೆಯುತ್ತದೆ ಎಂದು ಕಾಣಿಸುವುದಿಲ್ಲ ಎಂದರೆ ಸರಿ. ಸದರಿ ದೃಶ್ಯಾವಳಿಗಳಲ್ಲಿ ಆರೋಪಿ ನಡೆದುಕೊಂಡು ಹೋಗುವ ದೃಶ್ಯ ಕಾಣಿಸಿತ್ತಾ ಎಂದರೆ ಅವರು ಕಟ್ಟೆಯ ಎದುರು ನಿಂತಿರುವ ದೃಶ್ಯ ಕಾಣಿಸಿರುತ್ತದೆ, ಅವರು ನಡೆದುಕೊಂಡು ಹೋಗಿರುವ ದೃಶ್ಯ ಕಾಣಿಸಿರುವುದಿಲ್ಲ. ಸದರಿ ದೃಶ್ಯಾವಳಿಗಳಲ್ಲಿ ಆರೋಪಿಯು ನಡೆದುಕೊಂಡು ಹೋಗುವುದನ್ನು ನೋಡಿದ್ದೀರಾ ಎಂದರೆ ನಾನು ಗಮನಿಸಿರುವುದಿಲ್ಲ. ನಾನು ಪೋಲಿಸರ ಮುಂದೆ ಸದರಿ ಕೊರಗಜ್ಜನ ಕಟ್ಟೆಯ ಒಳಗಿನಿಂದ ಹರೀಶ್ ಪೂಜಾರಿ ಬಿಳಿ ಲುಂಗಿ ಉಟ್ಟು ಬರುತ್ತಿರುವುದು ಎಂದು ಹೇಳಿರುವುದಿಲ್ಲ. **ಸದರಿ ಭಾಗವನ್ನು ನಿಡಿ-2 ಎಂದು ಮಾನ್ಯ ಸರ್ಕಾರಿ ಅಭಿಯೋಜಕರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ಸರ್ಕಾರಿ ಅಭಿಯಾಜಕರು ಸದರಿ ದಾಖಲೆಯನ್ನು ಪೂರ್ಣ ಪ್ರಮಾಣದಲ್ಲಿ ಪರಿಗಣಿಸಬೇಕೆಂದು ಮನವಿ ಮಾಡಿರುತ್ತಾರೆ.**

11. ಚಾಸಾ-2 ರವರು ನನ್ನ ಸ್ಟುಡಿಯೋಗೆ ಬೆಳಗ್ಗೆ 10.30 ಗಂಟೆಗೆ ಬಂದಿರುತ್ತಾರೆ. ಅವರನ್ನು ಯಾರು ನನ್ನ ಬಳಿ ಕಳುಹಿಸಿರುತ್ತಾರೆ ಎಂದು ನಾನು ಕೇಳಿರುವುದಿಲ್ಲ. ಪೋಲಿಸರು ಚಾಸಾ-2 ರವರ ಮೊಬೈಲ್ ನಲ್ಲಿದ್ದ ದೃಶ್ಯಾವಳಿಗಳನ್ನು ಸಿಡಿಗೆ ವರ್ಗಾಯಿಸಲು ಹೇಳಿರುವುದಿಲ್ಲ. ನಾನು ಚಾಸಾ-2 ರವರ ಬಳಿ ಅದು ಎಷ್ಟು ದಿನಗಳ ಹಿಂದಿನ ವಿಡಿಯೋ ಎಂದು ಕೇಳಿರುವುದಿಲ್ಲ. ಕೊರಗಜ್ಜನ ಕಟ್ಟೆಗೆ ಬೆಂಕಿ ಹಾಕಿದ್ದಾರೆ ಎಂಬ ಗುಮಾನಿಯ ವಿಡಿಯೋಗಳು ಅನೇಕ

ಬಾರಿ ಪ್ರಸಾರವಾಗಿರುತ್ತದೆ ಎಂದರೆ ಸರಿ.

12. ಬೆಂಕಿ ಹಾಕಿದ್ದಾರೆ ಎನ್ನುವ ವಿಚಾರ ನಿಮ್ಮ ಗಮನಕ್ಕೆ ಪ್ರಥಮ ಬಾರಿಗೆ ಯಾವಾಗ ಬಂದಿರುತ್ತದೆ ಎಂದರೆ ನನ್ನ ಮೊಬೈಲ್ ನಲ್ಲಿ ಒಂದು ಚಾನೆಲ್ ನಲ್ಲಿ ಪ್ರಸಾರವಾಗಿರುವುದನ್ನು ನಾನು ನೋಡಿರುತ್ತೇನೆ. ದಿನಾಂಕ 10.08.2023 ರ ಪೂರ್ವದಲ್ಲಿ ನಾನು ಸುಮಾರು ಚಾನೆಲ್ ಅಂದರೆ ಟಿವಿ 9, ಸುದ್ದಿ ಚಾನೆಲ್, INSTAGRAM ಗಳಲ್ಲಿ ಪ್ರಸಾರವಾಗಿರುವುದನ್ನು ನೋಡಿರುತ್ತೇನೆ. ನಿಪಿ-11 ನ್ನು ನನ್ನನ್ನು ಕೇಳಿ ಬರೆದು ನನ್ನ ಸಹಿ ಪಡೆದಿರುತ್ತಾರೆ. ನಿಪಿ-11 ರಲ್ಲಿ ಕಾಣಿಸಿರುವ "ವೇಣೂರು ಪೋಲಿಸ್ ಠಾಣಾ ................................................................................ ... ........................................................ ಅಳವಡಿಸಿ ನೀಡಿರುತ್ತೇನೆ " ಎನ್ನುವ ಭಾಗವನ್ನು ದಿನಾಂಕ 04.09.2023 ರ ಹಿಂದಿನ ಯಾವುದೇ ದಾಖಲೆಗಳಲ್ಲಿ ಪೋಲಿಸರ ಮುಂದೆ ಹೇಳಿರುವುದಿಲ್ಲ. ಸದರಿ ಭಾಗವನ್ನು **ನಿಡಿ-3** ಎಂದು ಗುರುತಿಸಲಾಯಿತು.

13. ಚಾಸಾ-1 ರವರ ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ನಮ್ಮ ಮನೆಯವರು ಹೋಗುತ್ತಾರೆ, ಆದರೆ ತೀರಾ ಕಡಿಮೆ. ನಿಪಿ-6 ಕ್ಕೆ ಸಹಿ ಮಾಡುವ ಸಮಯದಲ್ಲಿ ನನ್ನೊಂದಿಗೆ ಚಾಸಾ-2 ಮತ್ತು ಚಾಸಾ-8 ರವರು ಹಾಜರಿದ್ದರು. ಚಾಸಾ-8 ರವರ ಹೆಂಡತಿ ನಮ್ಮ ಪಂಚಾಯಿತಿಯ ಅಧ್ಯಕ್ಷರು, ಅವರು ಬಿಜೆಪಿ ಪಕ್ಷದವರು. ಚಾಸಾ-1, ನಾನು ಮತ್ತು ಚಾಸಾ-8 ರವರು ಒಂದೇ ಜಾತಿಯವರು. ನಮ್ಮ ಬೆಳ್ತಂಗಡಿ ಎಂ.ಎಲ್.ಎ ರವರು ಬಿಜೆಪಿ ಪಕ್ಷದವರು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಚಾಸಾ-1

ಮತ್ತು ಅವರ ಗುಂಪಿನವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾಸಾ-2 ರವರ ಕೈಯಿಂದ ಮೊಬೈಲನ್ನು ಪೋಲಿಸರು ಪಡೆದುಕೊಂಡಿರುತ್ತಾರಾ ಎಂದರೆ ಇಲ್ಲ. ಪೋಲಿಸರು ನಾನು ಕೊಟ್ಟ ಸಿಡಿಯನ್ನು ಪರೀಕ್ಷಿಸಿರುತ್ತಾರಾ ಎಂದರೆ ಅದನ್ನು ವೀಕ್ಷಿಸಿ ಮಾತ್ರ ಪರಿಶೀಲನೆ ಮಾಡುತ್ತಾರೆ. ಚಾಸಾ-2 ರವರು ನನ್ನ ಕೈಗೆ ಮೊಬೈಲನ್ನು ಕೊಟ್ಟಿರುವುದೇ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.